ವಿಷಯ : ಕನ್ನಡ ಚಲನ ಚಿತ್ರಗಳಿಗೆ ಸಹಾಯ ಧನ.

ಪ್ರಶ್ನೆ : 204 (598) ಶ್ರೀ **ಜ್ಞಾನದೇವ ದೊಡ್ಡಮೇಟಿ** (ರೋಣ್).— ಮಾನ್ಯ ವಾರ್ತಾ ಪ್ರಚಾರ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) 1983-84ನೇ ಸಾಲಿನವರೆಗೆ ಕನ್ನಡ ಚಲನ ಚಿತ್ರಗಳಿಗೆ ಸಹಾಯ ಧನವಾಗಿ ಬಿಡುಗಡೆ ಮಾಡಬೇಕಾದ ಹಣವೆಷ್ಟು ;

ಆ) ಈಗ ಸದ್ಯದಲ್ಲಿ ಬಿಡುಗಡೆ ಮಾಡಲಾದ ಹಣವೆಷ್ಟು? ಹಾಗೂ ಉಳಿಕೆಯ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ;

ಇ) ರೂಪಕ ಚಲನಚಿತ್ರಗಳಿಗೆ ಪೂರ್ಣ ತೆರಿಗೆ ವಿನಾಯಿತಿಯನ್ನು ನೀಡುವ ಬಗ್ಗೆ ಅನುಸರಿಸುವ ವಿಧಾನಗಳೇನು ;

ಈ) ಎಲ್ಲಾ ಕನ್ನಡ ಚಲನ ಚಿತ್ರಗಳಿಗೂ ತೆರಿಗೆ ವಿನಾಯಿತಿ ನೀಡುವ ಪ್ರಶ್ನೆ ಸರ್ಕಾರದ ಮುಂದಿದೆಯೇ ?

ಉತ್ತರ : ಶ್ರೀ ಎಂ. ರಘುಪತಿ(ವಾರ್ತಾ, ಪ್ರವಾಸೋದ್ಯಮ ಸಚಿವರು).—ಅ) 40,00,000-00 (ರೂ. ನಲವತ್ತು ಲಕ್ಷ)

ಆ) ಸಂಪೂರ್ಣ ಹಣ ಬಿಡುಗಡೆಯಾಗಿದೆ. ಆದುದರಿಂದ ಬಾಕಿ ಮೊಬಲಗು ಏನೂ ಇಲ್ಲ.

ಇ) ಕರ್ನಾಟಕ ಮನರಂಜನಾ ಕಾಯ್ದೆ 1958ರ ಅನುಗುಣವಾಗಿ, 4-4-81ರಿಂದ ಶೇಕಡಾ 100ರಷ್ಟು ತೆರಿಗೆ ವಿನಾಯಿತಿಯನ್ನು ರಾಜ್ಯ ಅಥವಾ ಕೇಂದ್ರ ಸರ್ಕಾರದಿಂದ ಪ್ರಶಸ್ತಿ ಪಡೆದ ಪ್ರಾಂತೀಯ ಭಾಷೆಗಳ ಚಿತ್ರಗಳಿಗೆ ಒಂದು ವರ್ಷಗಳ ಕಾಲ ನೀಡಲಾಗುವುದು. ಆದರಂತೆ ಉಳಿದ ಭಾಷಾ ಚಿತ್ರಗಳಿಗೆ ಮೂರು ವಾರಗಳ ಕಾಲ ಶೇಕಡ 100 ತೆರಿಗೆ ವಿನಾಯಿತಿ ನೀಡಲಾಗುವುದು.

ಇ) ಈ ಕೆಳಕಂಡ ಗುಂಪಿನ ಚಿತ್ರಗಳಿಗೂ ಶೇಕಡ 100 ತೆರಿಗೆ ವಿನಾಯಿತಿ ನೀಡಬಹುದು.

1) ಮಕ್ಕಳ ಚಿತ್ರ

2) ಬೋಧನ ಪ್ರದ ಚಿತ್ರ

3) ಚಿತ್ರದ ಪ್ರದರ್ಶನದಿಂದ ಬಂದ ಹಣವನ್ನು ಯಾವುದಾದರೂ ಧಾರ್ಮಿಕ, ದತ್ತಿ ಅಥವಾ ಸಾರ್ವಜನಿಕ ಕಾರ್ಯಗಳಿಗೆ ಉಪಯೋಗಿಸುವ ಸಂದರ್ಭಗಳಲ್ಲಿ.

4) ಮಾನ್ಯತೆ ಪಡೆದ ಚಲನಚಿತ್ರ ಸೊಸೈಟಿಯು ನಡೆಸುವ ಚಲನ ಚಿತ್ರ ಪ್ರದರ್ಶನಗಳಿಗೆ.

5) ಚಲನ ಚಿತ್ರ ಪ್ರದರ್ಶನಗಳು ಕೇವಲ ಮನರಂಜನೆ, ವೈಜ್ಞಾನಿಕ ಅಥವಾ ಬೋಧ ಪ್ರದವಾಗಿದ್ದು ಯಾವುದೇ ಲಾಭಕ್ಕೆ ಅಲ್ಲದಿದ್ದಾಗ.

ಈ) ಪ್ರಸ್ತುತ, ದೇಶದ ಯಾವುದೇ ಭಾಗದಲ್ಲಿ ತಯಾರಾದ ಎಲ್ಲಾ ಕನ್ನಡ ಚಿತ್ರಗಳಿಗೆ 50 ತೆರಿಗೆ ವಿನಾಯಿತಿ ನೀಡಲಾಗುತ್ತಿದೆ.

ಶ್ರೀ ಜ್ಞಾನ್ ದೇವ್ ದೊಡ್ಡಮೇಟಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಸಂಪೂರ್ಣವಾಗಿ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ತಿಳಿಸಿದ್ದಾರೆ. ಆದರೆ ಚಲನಚಿತ್ರ ನಿರ್ಮಾಪಕರಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ಎನ್ನುವುದನ್ನು ದಯವಿಟ್ಟು ತಿಳಿಸುತ್ತೀರಾ?

ಶ್ರೀ ಎಂ ರಘುಪತಿ.— ಸ್ವಾಮಿ, ನಾವು 1983-84ನೇ ಸಾಲಿನಲ್ಲಿ ಸುಮಾರು 45 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇನ್ನು ಮೂರನೆ ಎರಡರಷ್ಟು ಹಣ ಬಾಕಿ ಇದೆ. ಅಂದರೆ 26.25 ಲಕ್ಷ ರೂಪಾಯಿಗಳು, ಮತ್ತೆ ಇತ್ತೀಚೆಗೆ ನಾವು 14.80 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇನ್ನು ಉಳಿದ ಬಾಕಿಯನ್ನು ಆದಷ್ಟು ಬೇಗ ಕೊಡುವ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಜ್ಞಾನ್ ದೇವ್ ದೊಡ್ಡಮೇಟಿ.— ಕರ್ನಾಟಕ ರಾಜ್ಯದಲ್ಲಿಯೇ ಕನ್ನಡ ಚಲನ ಚಿತ್ರಗಳನ್ನು ನಿರ್ಮಾಣ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಎಂ. ರಘುಪತಿ — ಈ ವಿಚಾರ ಸರ್ಕಾರದ ದೃಷ್ಟಿಯಲ್ಲಿದ್ದರೂ ಮಾಡುವುದು ಕಷ್ಟವಾಗುತ್ತದೆ. ನಮ್ಮಲ್ಲಿ ಎಲ್ಲಾ ಸೌಲಭ್ಯಗಳು ಇಲ್ಲ. ಫಿಲಂ ಪ್ರೊಸೆಸ್ ರೆಕಾರ್ಡಿಂಗ್ ನಮ್ಮಲ್ಲಿ ಇಲ್ಲದೆ ಇರುವುದರಿಂದ ಕಷ್ಟವಿದೆ. ಕರ್ನಾಟಕ ರಾಜ್ಯದಲ್ಲಿ ಕನ್ನಡ ಚಲನ ಚಿತ್ರಗಳನ್ನು ಪೂರ್ತಿ ಮಾಡಬೇಕಾದರೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿ ಕೊಡಬೇಕಾಗುತ್ತದೆ.

ವಿಷಯ : ಸಾರ್ವಜನಿಕರ ಕುಂದು ಕೊರತೆಗಳ ನಿವಾರಣೆ

ಪ್ರಶ್ನೆ : 205(594) ಶ್ರೀ **ಬಿ. ಜಿ. ಬಣಕಾರ್** (ಹಿರೇಕೆರೂರು).— ಮಾನ್ಯ ಕಾನೂನು ಸಂಸದೀಯ ವ್ಯವಹಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;—

ಅ) 1983 ಜನವರಿಯಿಂದ 31-12-1983ರ ವರೆಗೆ ಸಾರ್ವಜನಿಕರಿಂದ ಕುಂದು ಕೊರತೆಗಳ ನಿವಾರಣೆ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು ;

ಅ) ಬಂದ ಅರ್ಜಿಗಳಲ್ಲಿ ಎಷ್ಟು ಅರ್ಜಿಗಳು ವಿಲೆ ಆಗಿವೆ ;

ಇ) ಈ ಅರ್ಜಿಗಳ ಪೈಕಿ ಎಷ್ಟು ಅರ್ಜಿಗಳಲ್ಲಿ ಅಧಿಕಾರಿಗಳ ವಿರುದ್ಧ ಆಪಾದನೆ ಮಾಡಲಾಗಿದೆ ;

ಈ) ಎಷ್ಟು ಅರ್ಜಿಗಳನ್ನು ಇತ್ಯರ್ಥ ಮಾಡಿ ಕ್ರಮ ತೆಗೆದುಕೊಳ್ಳಲಾಗಿದೆ ?

ಉತ್ತರ : ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ವಸತಿ ಹಾಗೂ ಸಾರ್ವಜನಿಕ ಕುಂದುಕೊರತೆಗಳ ಖಾತೆಯ ಸಚಿವರು).— ಅ) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿ ಸಾರ್ವಜನಿಕ ದೂರು ವಿಚಾರಣಾ ವಿಭಾಗ ದಿನಾಂಕ 1-7-1983 ರಿಂದ ಪ್ರಾರಂಭವಾಗಿದ್ದು, 1-7-1983 ರಿಂದ 31-12-1983ರ ವರೆಗೆ 36,924 ಮನವಿಗಳು ಬಂದಿವೆ. ಈ ವಿಭಾಗ ಪ್ರಾರಂಭವಾಗುವುದಕ್ಕಿಂತ ಮುಂಚೆ 45,595 ಮನವಿಗಳು ಬಂದಿದ್ದವು.

ಆ) ಈ ವಿಭಾಗವು ಪ್ರಾರಂಭವಾದಾಗಿನಿಂದ ಡಿಸೆಂಬರ್ 1983ರ ವರೆಗೆ 36,924 ಮನವಿಗಳನ್ನು ಸ್ವೀಕರಿಸಿದ್ದು, ಅವುಗಳಲ್ಲಿ ಪರಿಹರಿಸಲು ಅರ್ಹವೆನಿಸಿದ 15,869 ಮನವಿಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಸೂಕ್ತಕ್ರಮಕ್ಕಾಗಿ ಕಳುಹಿಸಿದೆ. ಕುಂದುಕೊರತೆಗಳ ವರ್ಗಕ್ಕೆ ಸೇರಿದ 18,108 ಮನವಿಗಳನ್ನು ಪರಿಶೀಲಿಸಿ ಗಣನೆಗೆ ಅರ್ಹವಾಗಿಲ್ಲವೆಂದು ಕಡಿತಗೊಳಿಸಲಾಗಿದೆ.

ಇ) 379 ಈ) ಜಿಲ್ಲಾ ದೂರು ವಿಚಾರಣಾಧಿಕಾರಿಗಳ ವಿಲೇವಾರಿಯು ಸೇರಿ 5,552 ಅರ್ಜಿಗಳನ್ನು ಅಂತಿಮವಾಗಿ ಇತ್ಯರ್ಥ ಮಾಡಲಾಗಿದೆ.

ಶ್ರೀ ಬಿ. ಜೆ. ಬಣಕಾರ್.—ಅರ್ಜಿಗಳನ್ನು ವಿಚಾರಣೆ ಮಾಡಲಿಕ್ಕೆ ಜಿಲ್ಲಾಧಿಕಾರಿಗಳವರಿಗೆ. ಅಸಿಸ್ಟೆಂಟ್ ಕಮಿಷನರ್‌ರವರಿಗೆ, ತಹಶೀಲ್ದಾರ್‌ರವರಿಗೆ ಏನೇನು ಅಧಿಕಾರಗಳನ್ನು ಕೊಟ್ಟಿದ್ದೀರಿ ?

ಶ್ರೀ ಎ. ಲಕ್ಷ್ಮೀಸಾಗರ್.— ಕಾನೂನು ಪ್ರಕಾರ ಎರಡು ಹಂತದಲ್ಲಿ ಅಧಿಕಾರಗಳನ್ನು ಕೊಡಲಾಗಿದೆ. ಮನವಿಗಳು ಬಂದಾಗ ಮನವಿಯನ್ನು ಗವನಕ್ಕೆ ತೆಗೆದುಕೊಂಡು ಕೆಳಗಿನ ಅಧಿಕಾರಿಗಳು ಮೇಲಿನಾಧಿಕಾರಿಗಳಿಗೆ ರವಾನಿಸುತ್ತಾರೆ. ಮನವಿ ಬಂದ ಮೇಲೆ ತಮ್ಮ ಜವಾಬ್ದಾರಿಯನ್ನು ಅರಿತು ಈ ಅಧಿಕಾರಿಗಳು ಕಾನೂನು ಪ್ರಕಾರ ತಮ್ಮ ಕೆಲಸ ನಿರ್ವಹಿಸಬೇಕಾಗುತ್ತದೆ.

ಶ್ರೀ ಬಿ.ಜೆ ಬಣಕಾರ್.—ಅಧಿಕಾರಿಗಳ ವಿರುದ್ಧ ಆಪಾದನೆ ಮಾಡಿದ ಅರ್ಜಿಗಳು 379 ಬಂದಿವೆ. ಬಂದಂತಹ ಆಪಾದನೆಗಳನ್ನು ಯಾವ ರೀತಿ ತನಿಖೆ ಮಾಡುತ್ತೀರಿ ? ಈ ಅಧಿಕಾರವನ್ನು ಯಾರಿಗೆ ಕೊಟ್ಟಿದ್ದೀರಿ ?

ಶ್ರೀ ಎ. ಲಕ್ಷ್ಮೀಸಾಗರ್.— ಆಪಾದನೆಗಳು ಯಾವ ರೀತಿ ಬಂದಿವೆ ಎಂಬುದರ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ. ಪೋಲೀಸ್‌ನವರು ಸರಿಯಾಗಿ ಮಾತನಾಡಿಸುವುದಿಲ್ಲ, ತಹಶೀಲ್ದಾರ್ ಸರಿಯಾಗಿ ಕೆಲಸ ಮಾಡಿಕೊಡುತ್ತಿಲ್ಲ, ರೇಷ್ಮೆ ಇಲಾಖೆ ಸರಿಯಾಗಿ ಕೆಲಸ ಮಾಡುತ್ತಿಲ್ಲ, ಈ ತರಹ ದೂರುಗಳ ಬಂದಿವೆ. ಯಾವ್ಯಾವ ಅಧಿಕಾರಿಗಳ ಮೇಲೆ ದೂರುಗಳು ಬಂದಿವೆ ಆಯಾಯ ಇಲಾಖೆಗಳ ಮೇಲಿನಾಧಿಕಾರಿಗಳವರಿಗೆ ಇದರ ಬಗ್ಗೆ ತನಿಖೆ ಮಾಡಿ ಸೂಕ್ತಕ್ರಮ ತೆಗೆದುಕೊಳ್ಳಬೇಕೆಂದು ಬಂದಂತಹ ಅರ್ಜಿಗಳನ್ನು ಕಳುಹಿಸಿಕೊಡಲಾಗಿದೆ.

ಶ್ರೀ ಎ. ಮುನಿಯಪ್ಪ.—ಕೋಲಾರ ಜಿಲ್ಲೆಯಿಂದ ಎಷ್ಟು ಮನವಿಗಳು ಬಂದಿವೆ ? ಅವುಗಳಲ್ಲಿ ವಿಲೇವಾರಿ ಆಗಿರತಕ್ಕ ಅರ್ಜಿಗಳೆಷ್ಟು ? ವಿಲೇವಾರಿ ಆಗದೇ ಇರತಕ್ಕ ಅರ್ಜಿಗಳೆಷ್ಟು ?

ಶ್ರೀ ಎ. ಲಕ್ಷ್ಮೀಸಾಗರ್.— ಕೋಲಾರ ಜಿಲ್ಲೆಯಿಂದ ಬಂದಿರತಕ್ಕ ಅರ್ಜಿಗಳು 454. ತೀರ್ಮಾನವಾಗಿರತಕ್ಕ ಅರ್ಜಿಗಳು 54. ಅಂತಿಮ ತೀರ್ಮಾನವಾಗಿರತಕ್ಕ ಅರ್ಜಿಗಳು 41.

ಶ್ರೀ ಎಂ. ವೀರಪ್ಪಮೊಯಿಲಿ.— ಸಾರ್ವಜನಿಕ ಕುಂದುಕೊರತೆಗಳನ್ನು ನಿವಾರಣೆ ಮಾಡತಕ್ಕ ಸಚಿವರು ಉತ್ತರ ಹೇಳುತ್ತಾ, ತಮಗೆ ಬಂದ ಅರ್ಜಿಗಳನ್ನು ಪರಿಶೀಲನೆ ಮಾಡುತ್ತೇವೆ, ಅವುಗಳನ್ನು ನಮ್ಮ ಬಾಕ್ಸ್‌ನಿಂದ ಇನ್ನೊಂದು ಬೇರೆ ಬಾಕ್ಸ್‌ಗೆ ಹಾಕಲಿಕ್ಕೆ ಅರ್ಜಿಗಳನ್ನು ಸ್ವೀಕಾರ ಮಾಡುತ್ತೇವೆಂದು ಹೇಳಿದ್ದಾರೆ. ಬೇರೆ ಬೇರೆ ಹಂತದಲ್ಲಿ ಡಿಸ್‌ಪೋಸಲ್ ಆಗತಕ್ಕ ಅರ್ಜಿಗಳ ಬಗ್ಗೆ ಫಾಲೋ ಅಪ್ ಮಾಡಲಿಕ್ಕೆ ಏನಾದರೂ ರಿಜಿಸ್ಟರ್ ವ್ಯವಸ್ಥೆ ಮಾಡಿದ್ದೀರಾ? ಯಾವ ಯಾವ ಇಲಾಖೆಗಳಿಗೆ ಎಷ್ಟೆಷ್ಟು ಅರ್ಜಿಗಳನ್ನು ಕಳುಹಿಸುತ್ತೀರಿ ಎನ್ನುವ ಅಂಕಿ ಸಂಖ್ಯೆಗಳು ಇಲ್ಲದಿದ್ದರೂ, ನಿಮಲ್ಲಿ ಎಷ್ಟು ಅರ್ಜಿಗಳು ಉಳಿದುಕೊಂಡಿವೆ ಅದನ್ನಾದರೂ ಹೇಳುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.— 5,552 ಅರ್ಜಿಗಳನ್ನು ಅಂತಿಮವಾಗಿ ಇತ್ಯರ್ಥಗೊಳಿಸಲಾಗಿದೆ. ಈಗ ಕೇಳಿರತಕ್ಕ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ಇನ್ನು ಹೆಚ್ಚಿನ ವಿವರಗಳು ಬೇಕಾದರೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ. ಸುಮಾರು 10 ಸಾವಿರ ಅರ್ಜಿಗಳು ಬೇರೆ ಬೇರೆ ಹಂತಗಳಲ್ಲಿವೆ. ನಮಗೆ ಜಮೀನು ಕೊಡಿ, ನಮಗೆ ಬಾವಿ ಕೊಡಿ, ರಸ್ತೆ ಮಾಡಿಸಿ, ಎಂದು ಅರ್ಜಿಗಳನ್ನು ಬರೆದುಕೊಂಡರೆ ಇವುಗಳನ್ನೆಲ್ಲಾ ಬೇಗ ಮಾಡಿಸಿಕೊಡುವುದಕ್ಕೆ ಆಗುವುದಿಲ್ಲ. ನಮ್ಮ ನಿಯಮಗಳ ಪ್ರಕಾರ ಒಂದು ತಿಂಗಳೊಳಗೆ ನಾವು ಏನು ಕ್ರಮ ತೆಗೆದುಕೊಂಡಿದ್ದೇವೆ ಎನ್ನುವುದನ್ನು ಅರ್ಜಿ ಹಾಕಿಕೊಂಡವರಿಗೆ ತಿಳಿಸಬೇಕಾಗಿದೆ. ವಿಷಯಗಳನ್ನು ತಿಳಿದುಕೊಳ್ಳುವುದಕೋಸ್ಕರ ತಹಶೀಲ್ದಾರರಿಂದ, ಅಸಿಸ್ಟೆಂಟ್ ಕಮಿಷನರ್‌ರವರಿಗೆ, ಅಸಿಸ್ಟೆಂಟ್ ಕಮಿಷನರ್ ಅವರಿಂದ ಜಿಲ್ಲಾಧಿಕಾರಿಗಳವರಿಗೆ ರವಾನಿಸಲಾಗುತ್ತದೆ.

ಅರ್ಜಿ ಕೊಟ್ಟ ತಕ್ಷಣ ರಿಜಿಸ್ಟರ್ ಮಾಡಿಕೊಳ್ಳಲಾಗುತ್ತದೆ. ಯಾರು ಅರ್ಜಿ ಕೊಟ್ಟವರು, ವಿಷಯ ಏನು ಎಂಬುದು ರಿಜಿಸ್ಟರ್‌ನಲ್ಲಿ ನಮೂದಿಸಲಾಗುತ್ತದೆ. ಕೆಲವೊಂದು ವಿಚಾರಗಳು ಎರಡು ಇಲಾಖೆಗೆ ಹೋಗಬೇಕಾಗಿರುತ್ತದೆ, ಅಂತಹ ಸಂದರ್ಭದಲ್ಲಿ ತಡ ಆಗುತ್ತದೆ. ಅರ್ಜಿಗಳು ಏನಾಗಿವೆ ಎಂಬುದನ್ನು ಒಂದು ತಿಂಗಳೊಳಗೆ ಕೇಂದ್ರ ಕಛೇರಿಗೆ ಜಿಲ್ಲಾಧಿಕಾರಿಗಳ ಮೂಲಕ ವಿಲೇವಾರಿ ಆಯಿತೇ ಇಲ್ಲವೇ ಎಂಬುದನ್ನು ನಮಗೆ ತಿಳಿಸಬೇಕು. ಈ ಒಂದು ಆಧಾರದ ಮೇಲೆ ನಾವು ಅರ್ಜಿಗಳನ್ನು ಕಳುಹಿಸಿದ್ದೇವೆ.

ಶ್ರೀ ವೈ. ರಾಮಕೃಷ್ಣ.— ಸುಮಾರು 379 ದೂರುಗಳು ಅಧಿಕಾರಿಗಳ ಮೇಲೆ ಬಂದಿವೆ. ಅವುಗಳನ್ನು ನೇರವಾಗಿ ವಿಜಿಲೆನ್ಸ್ ಕಮಿಷನ್‌ಗೆ ಕಳುಹಿಸುತ್ತೀರಾ? 18 ಸಾವಿರ ಅರ್ಜಿಗಳನ್ನು ಸ್ವೀಕಾರ ಮಾಡಿ ಇಟ್ಟುಕೊಂಡಿದ್ದೀರಿ. ಆ ಅರ್ಜಿಗಳ ಪಾಡೇನು? ಅನರ್ಹ ಅರ್ಜಿಗಳನ್ನು ನೋಡಿ ಕೊಳ್ಳುವುದಕ್ಕೆ ಯಾರಿದ್ದಾರೆ?

ಉಪಾಧ್ಯಕ್ಷರು.— ಅರ್ಹವಾಗಿಲ್ಲದ ಅರ್ಜಿಗಳನ್ನು ಏನು ಮಾಡುವುದಕ್ಕಾಗುತ್ತದೆ?

ಶ್ರೀ ವೈ. ರಾಮಕೃಷ್ಣ.—ಅವುಗಳನ್ನು ಡೀಲ್ ಮಾಡುವುದಕ್ಕೆ ಡಿಪಾರ್ಟ್‌ಮೆಂಟೇ ಇಲ್ಲವೇ ?

ಶ್ರೀ ಎ. ಲಕ್ಷ್ಮೀಸಾಗರ್.— ಅರ್ಹತೆ ಇಲ್ಲದೆ ಇರುವ ಅರ್ಜಿಗಳು. ನಿರ್ದಿಷ್ಟವಾದ ಅಪಾದನೆ ಯಾರ ಮೇಲೂ ಇರುವುದಿಲ್ಲ. ನನ್ನನ್ನು ಬೈಯ್ದರು ಎಂದು ಅರ್ಜಿ ಕೊಟ್ಟಿರುತ್ತಾರೆ, ಯಾರು ಬೈಯ್ದರು ಎಂದು ನಿರ್ದಿಷ್ಟವಾಗಿ ತಿಳಿಸಿರುವುದಿಲ್ಲ. ನಿರ್ದಿಷ್ಟವಾದ ಅಪಾದನೆಗಳು ಬಂದರೆ ಅವುಗಳನ್ನು ವಿಜಿಲೆನ್ಸ್ ಕಮಿಷನ್‌ಗೆ ಕಳುಹಿಸತಕ್ಕ ವ್ಯವಸ್ಥೆ ಮಾಡುತ್ತೇವೆ. ನನಗೆ ಕೆಲಸ ಕೊಡಿ ಎಂದು ಬರೆದು ಕೊಳ್ಳುತ್ತಾರೆ. ಮಾಡಬಾರದ ಕೆಲಸ ಕೊಡಿಯೆಂದು ಬರೆದುಕೊಳ್ಳುತ್ತಾರೆ. ಇಲ್ಲೊಂದು ಅರ್ಜಿ ಯಾವ ರೀತಿ ಬರೆದಿದ್ದಾರೆಂದರೆ ಅದು ಈ ರೀತಿ ಇದೆ.

"ಬಂಧುಗಳು ಎನಗಿಲ್ಲ, ಬದುಕಿನಲ್ಲಿ ಸುಖವಿಲ್ಲ, ನಿಂದೆಯೊಳು ನೊಂದೆನ್ನೆ ಲಕುಮಿ ಸಾಗರನೆ" ಈ ರೀತಿ ಬರೆಯುತ್ತಾರೆ. ಇದನ್ನು ಯಾರಿಗೆ ಕಳುಹಿಸಬೇಕು? ನಾನು ಕವಿಯಲ್ಲದಿದ್ದರೂ ಈ ರೀತಿ ಬರೆದು ಕಳುಹಿಸಿದ್ದೇನೆ.

"ಮಾಡಲಾಗದ ಈ ಭವ್ಯ ವ್ಯಥೆಯ ಹೊತ್ತು ಪರನಿಂದೆಗೊಳಗಾಗಿ ನೊಂದುತಿಹನೈ
ಶ್ರೀ ಗುರುರಾಘವೇಂದ್ರ".

ಶ್ರೀ ಜಿ.ಕೆ. ಸುಬ್ಬಯ್ಯ —ಈ ಎಲ್ಲಾ ಪುಕಾರುಗಳು ಅಧಿಕಾರಿಗಳ ಮೇಲೆ ಬಂದಿವೆ. ಅಧಿಕಾರಿಗಳ ಮೇಲೆ ಬಂದಂತಹ ಪುಕಾರುಗಳನ್ನು ಮೇಲಿನಾಧಿಕಾರಿಗಳಿಗೆ ತಿಳಿಸುತ್ತೀರಿ, ಇದುವರೆಗೆ ಎಷ್ಟು ವಿಲೇವಾರಿ ಆಗಿವೆ? ಜಮೀನುಕೊಡಿ,ರಸ್ತೆ ಮಾಡಿಸಿ ಕೊಡಿ ಎಂದು ಬಂದ ಪುಕಾರುಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎ. ಲಕ್ಷ್ಮೀಸಾಗರ್.— ನಾನು ಈಗಾಗಲೇ ಉತ್ತರದಲ್ಲಿ ಹೇಳಿದ್ದೇನೆ. ದೂರುಗಳು ಯಾವ ರೀತಿ ಬರುತ್ತವೆ ಅಂದರೆ ವಿಲೇಜ್ ಪಂಚಾಯ್ತಿ ಸೆಕ್ರೆಟರಿ ಸೀಲ್ ಹಾಕಲಿಲ್ಲ? ಇಷ್ಟೊತ್ತಿಗೆ ಹೋಗುತ್ತಾರೆ. ಇಷ್ಟೊತ್ತಿಗೆ ಬರುತ್ತಾರೆ ಎಂದು ಅರ್ಜಿ ಬರೆಯುತ್ತಾರೆ. ಅವುಗಳನ್ನು ಮೇಲಿನಾಧಿಕಾರಿಗಳಿಗೆ ಕಳುಹಿಸುತ್ತೇವೆ. ನಿರ್ದಿಷ್ಟವಾದ ಆಪಾದನೆಗಳು ಇಲ್ಲದಿದ್ದರೆ ಕ್ರಮ ತೆಗೆದು ಕೊಳ್ಳುವುದಕ್ಕೆ ಆಗುವುದಿಲ್ಲ. ಆದರೂ ಇಂತಹ ದೂರುಗಳು ಬಂದರೆ ಮೇಲಿನಾಧಿಕಾರಿಗಳು ಗಮನ ದಲ್ಲಿಟ್ಟು ಸ್ಯಾಧ್ಯಾಸಾಧ್ಯತೆಯ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಸದರಿ ಅರ್ಜಿಗಳನ್ನು ಮೇಲಿನಾಧಿ ಕಾರಿಗಳಿಗೆ ಕಳುಹಿಸಿ ಕೊಟ್ಟಿದ್ದೇವೆ.

ಶ್ರೀ ಎನ್. ಚಿಕ್ಕೇಗೌಡ.— ಮಾನ್ಯ ಕುಂದುಕೊರತೆಗಳ ಸಚಿವರು ಅನೇಕ ಅರ್ಜಿಗಳ ವಿಚಾರದಲ್ಲಿ ಹೇಳಿದ್ದಾರೆ. ಗಂಡ ನನ್ನನ್ನು ಬಿಟ್ಟಿದ್ದಾನೆ, ನನಗೆ ಗಂಡನನ್ನು ಕೊಡಿ, ನನಗೆ ಹೆಂಡತಿ ಬಿಟ್ಟಿದ್ದಾಳೆ, ನನಗೆ ಹೆಂಡತಿ ಕೊಡಿಯೆಂದು, ನನಗೆ ವಿವಾಹ ವಿಚ್ಛೇದನ ಕೊಡಿಸಿಯೆಂದು, ವರದಕ್ಷಿಣೆ ಪಿಡುಗು, ಮದುವೆ ಇಲ್ಲ, ಮದುವೆ ಮಾಡಿಸಿಕೊಡಿಯೆಂದು ಅರ್ಜಿಗಳು ಬಂದರೆ ಅವುಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು.— ಆ ಅರ್ಜಿಯನ್ನು ಬಿಕ್ಕೇಗೌಡರಿಗೇ ಕಳಿಸಿಬಿಡಿ.

ಶ್ರೀ ಸಿ. ಬೈರೇಗೌಡ.— ನನ್ನ ಕ್ಷೇತ್ರದಿಂದ ಒಬ್ಬ ವಧು 'ನಿಮನ್ನು ಮದುವೆ ಮಾಡಿಕೊಳ್ಳುತ್ತೇನೆ' ಎಂದು ಅರ್ಜಿಯನ್ನು ಕೊಟ್ಟಿರತಕ್ಕಂಥಾದ್ದು ಇವರ ಗಮನಕ್ಕೆ ಬಂದಿದೆಯೆ ? ಇದನ್ನು ಯಾವ ರೀತಿಯಲ್ಲಿ ವಿಲೇವಾರಿ ಮಾಡುತ್ತಾರೆ ಎಂದು ತಿಳಿಯಬಹುದು ?

ಶ್ರೀ ಎ. ಲಕ್ಷ್ಮೀಸಾಗರ್. — ಇಂತಹ ಅರ್ಜಿ ಯಾವುದೂ ಇದುವರೆಗೂ ನನಗೆ ಬಂದಿಲ್ಲ. ಬಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತೇನೆ.

ವಿಷಯ : ವಿಧಾನ ಮಂಡಲದ ಕಾರ್ಯಾಲಯವನ್ನು ಕಾರ್ಯಾಂಗದಿಂದ ಬೇರ್ಪಡಿಸುವ ಕುರಿತು.

ಪ್ರಶ್ನೆ : 206 (608) ಶ್ರೀ ಪಿ. ರಾಮ್‌ದೇವ್ (ಮಲ್ಲೇಶ್ವರಂ).— ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—